# ಕನ್ನಡ (1) – ದ್ವಿತೀಯ ಪಿಯುಸಿ
# ನೀಲನಕ್ಷೆ : 2022–23

| ಉದ್ದೇಶಗಳು | ಅಂಕ ನಿಗದಿ | ಜ್ಞಾನ (ಅಂಕ) ಬಹು ಆಯ್ಕೆ ಪ್ರಶ್ನೆಗಳು | ಗ್ರಹಿಕೆ (ಅಂಕ) | ಅಭಿವ್ಯಕ್ತಿ (ಅಂಕ) | ಪ್ರಶಂಸೆ (ಅಂಕ) |
|---|---|---|---|---|---|
| | | 1 ಅಂಕ | 2 ಅಂಕ | 3 ಅಂಕ | 4 ಅಂಕ<br>5 ಅಂಕ |
| **ಪದ್ಯ**<br>1. ಕದಡಿದ ಸಲಿಲಂ ತಿಳಿವಂದದೆ | 09 | 1 (1) | –– | 1 (3) | 1 (5) |
| 2. ವಚನಗಳು | 05 | 1 (1) | –– | –– | 1 (4) |
| 3. ಇನ್ನು ಹುಟ್ಟದೆಯಿರಲಿ ನಾರಿಯರೆನ್ನವೊಲು | 10 | 1 (1) | 1 (2) | 1 (3) | 1 (4) |
| 4. ಪಗೆಯಂ ಬಾಲಕನೆಂಬರೇ | 05 | 1 (1) | –– | –– | 1 (4) |
| 5. ಜಾಲಿಯ ಮರದಂತೆ | 03 | 1 (1) | 1 (2) | –– | –– |
| 6. ಹಬ್ಬಲಿ ಅವರ ರಸಬಳ್ಳಿ | 05 | 1 (1) | –– | –– | 1 (4) |
| 7. ಬೆಳಗುಜಾವ | 04 | 1 (1) | –– | 1 (3) | –– |
| 8. ಮುಂಬೈ ಜಾತಕ | 02 | –– | 1 (2) | –– | –– |
| 9. ಶಿಲುಬೆ ಏರಿದ್ದಾನೆ | 05 | –– | –– | –– | 1 (5) |
| 10. ಒಂದು ಹೂವು ಹೆಚ್ಚಿಗೆ ಇಡುತೀನಿ | 02 | –– | 1 (2) | –– | –– |
| 11. ಹತ್ತಿ... ಚಿತ್ತ.... ಮತ್ತು... | 01 | 1 (1) | –– | –– | –– |
| 12. ಒಮ್ಮೆ ನಗುತ್ತೇವೆ | 03 | 1 (1) | 1 (2) | –– | –– |
| **ಗದ್ಯ**<br>1. ಮುಟ್ಟಿಸಿಕೊಂಡವನು | 07 | 1 (1) | 1 (2) | –– | 1 (4) |
| 2. ವಾಲ್‌ಪರೈ: ಅಭಿವೃದ್ಧಿ ತಂದ ದುರಂತ | 03 | 1 (1) | 1 (2) | –– | –– |
| 3. ಆಯ್ಕೆಯಿದೆ ನಮ್ಮ ಕೈಯಲ್ಲಿ | 05 | 1 (1) | –– | –– | 1 (4) |
| 4. ಕನ್ನಡವನ್ನು ಕಟ್ಟುವ ಕೆಲಸ | 04 | 1 (1) | –– | 1 (3) | –– |
| 5. ಧಣಿಗಳ ಬೆಳ್ಳಿಲೋಟ | 05 | 1 (1) | –– | –– | 1 (4) |
| 6. ಬದುಕನ್ನು ಪ್ರೀತಿಸಿದ ಸಂತ | 04 | 1 (1) | –– | 1 (3) | –– |
| 7. ತಿರುಳ್ಗನ್ನಡದ ಬೆಳ್ನುಡಿ | 03 | 1 (1) | 1 (2) | –– | –– |
| 8. ಹಳ್ಳಿಯ ಚಹಾ ಹೊಟೇಲುಗಳು | 03 | 1 (1) | 1 (2) | –– | –– |
| **ದೀರ್ಘಗದ್ಯ : ಕೃಷ್ಣೇಗೌಡನ ಆನೆ** | 31 | 1 (3) | 5 (10) | 2 (6) | 3 (12) |
| **ಭಾಷಾಭ್ಯಾಸ** | 40 | –– | 7 (14) | –– | –– |
| **ರಚನೆ** | | –– | –– | –– | 2 (10) |
| **ಲೇಖನ** | | | | | 2 (8) |
| **ವಿಸ್ತರಣೆ** | | | | | 2 (8) |
| **ಒಟ್ಟು ಪ್ರಶ್ನೆಗಳು–55** | | 20 (20) | 21 (42) | 7 (21) | 14 (56)<br>+ 4 (20 |
| **ಒಟ್ಟು ಅಂಕಗಳು–159** | | | | **ಗರಿಷ್ಠ ಅಂಕಗಳು–100** | |

## ಮಾದರಿ ಪ್ರಶ್ನೆಪತ್ರಿಕೆ–2023

## ದ್ವಿತೀಯ ಪಿಯುಸಿ – ಕನ್ನಡ (1)

ಸಮಯ : 3 ಗಂಟೆ 15 ನಿಮಿಷಗಳು ಗರಿಷ್ಠ ಅಂಕಗಳು : 100

### ಅ–ಬಹು ಆಯ್ಕೆ ಪ್ರಶ್ನೆ ವಿಭಾಗ

I. *ಅ) ಈ ಕೆಳಗಿನ ಪ್ರಶ್ನೆಗಳಿಗೆ ನೀಡಿರುವ ಉತ್ತರಗಳಲ್ಲಿ ಸರಿಯಾದುದನ್ನು ಆರಿಸಿ ಬರೆಯಿರಿ.* ***10x 1=10***

1. ರಾವಣನ ಎದುರು ಪ್ರತ್ಯಕ್ಷವಾದ ವಿದ್ಯಾದೇವತೆ ಯಾರು?
   ಅ) ಶಂಕಿನಿ ವಿದ್ಯೆ ಆ) ಮಂತ್ರವಿದ್ಯೆ ಇ) ಬಹುರೂಪಿಣಿ ವಿದ್ಯೆ ಈ) ಡಾಕಿನಿ ವಿದ್ಯೆ
2. ಯಾರ ಕೈಯಲ್ಲಿ ದರ್ಪಣವಿದ್ದು ಫಲವಿಲ್ಲ?
   ಅ) ಮರ್ಕಟ ಆ) ಅಂಧಕ ಇ) ಹಂದೆ ಈ) ಚಂದಿರ
3. ರಾಜ ಸಭೆಯೊಳಗೆ ದ್ರೌಪದಿಯನ್ನು ಒದೆದವರು ಯಾರು?
   ಅ) ಕೀಚಕ ಆ) ವಲಲ ಇ) ವಿರಾಟರಾಜ ಈ) ಬೃಹನ್ನಳೆ
4. ತೈಲ ತೀರಿದ್ದು ಹೇಗೆ ತಿಳಿಯುತ್ತದೆ?
   ಅ) ದೀಪ ಆರಿದಾಗ ಆ) ಬತ್ತಿ ತೀರಿದಾಗ ಇ) ಕತ್ತಲಾದಾಗ ಈ) ಕಮಟು ವಾಸನೆ ಬಂದಾಗ
5. ಮಾರ್ಷನ ಜೊತೆಗಾರನ ಹೆಸರೇನು?
   ಅ) ವಾಲ್ಪರೈ ಆ) ಕುದುರೆ ಇ) ಪೊಣಚ್ಚಿ ಈ) ಆದಿವಾಸಿ
6. ಸ್ಥಳೀಯ ಭಾಷೆ ಕಲಿಯದ ಅನ್ಯ ಭಾಷಿಕರು ಏನಾಗುತ್ತಾರೆ?
   ಅ) ದೀಪ ಆ) ಬಾವಿಕಪ್ಪೆ ಇ) ದೂರವಾಗುತ್ತಾರೆ ಈ) ದ್ವೀಪ
7. ಕಲಾಂ ಅವರ ಆತ್ಮ ಚರಿತ್ರೆಯ ಹೆಸರೇನು?
   ಅ) ವಿಂಗ್ಸ್ ಆಫ್ ಫೈರ್ ಆ) ನೆನಪಿನ ದೋಣಿಯಲ್ಲಿ
   ಇ) ಕಲಾಂ ಮೇಷ್ಟ್ರು ಈ) ಚಂದ್ರಯಾನ
8. ಕೃಷ್ಣೇಗೌಡರ ಆನೆ ಮೊದಲು ಯಾವ ಮಠದಲ್ಲಿತ್ತು?
   ಅ) ಸಿದ್ಧಗಂಗಾ ಮಠ ಆ) ಸುತ್ತೂರು ಮಠ
   ಇ) ಆದಿಚುಂಚನಗಿರಿ ಮಠ ಈ) ಗೂಳೂರು ಮಠ
9. ಆನೆಯ ಮಾವುತನ ಹೆಸರೇನು?
   ಅ) ವೇಲಾಯುಧ ಆ) ಕೃಷ್ಣೆಗೌಡ
   ಇ) ನಾಗರಾಜ ಈ) ಗೌರಿ
10. ಪೋಲೀಸರು ಏನೆಂದು ಮಹಜರು ಬರೆದುಕೊಂಡರು?
    ಅ)ನಾಗರಾಜನ ಕೋವಿ ಸಿಕ್ಕಿದೆ ಹೆಣ ಸಿಕ್ಕಿಲ್ಲ ಆ)ಕೊಡಲಿ ಕೊಡಲು ಸಾಧ್ಯವಿಲ್ಲ.
    ಇ)ವೆಪನ್ ಸಾರ್ ವೆಪನ್ ಈ)ಯಾವುದೇ ಕೇಸ್ ಹಾಕುವುದಿಲ್ಲ

**ಆ) 11. ಹೊಂದಿಸಿ ಬರೆಯಿರಿ.** 5 x 1=5

| | |
|---|---|
| ಅ. ಪುಲಿಗೆರೆ ಸೋಮನಾಥ | 1. ಗರತಿಯ ಹಾಡು |
| ಆ. ಪುರಂದರದಾಸರು | 2. ಮುಕ್ತಕಂಠ |
| ಇ. ಹಬ್ಬಲಿ ಅವರ ರಸಬಳ್ಳಿ | 3. ಬಿ ಸುಕನ್ಯಾ ಮಾರುತಿ |
| ಈ. ದ. ರಾ. ಬೇಂದ್ರೆ | 4. ಸೋಮೇಶ್ವರ ಶತಕ |
| ಉ. ಒಮ್ಮೆ ನಗುತ್ತೇವೆ | 5. ಜಾಲಿಯ ಮರದಂತೆ |
| | 6. ನನ್ನ ಜನಗಳು |

**ಇ) 12.** ಬಿಟ್ಟ ಸ್ಥಳಗಳಿಗೆ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ. 5 x 1=5

(ಶಾಂಭವಿ, ವಾತ್ಸಾಯನ, ಸಿದ್ಲಿಂಗಿ, ಚಹಾ, ಸೀತಾ)

ಕ) ಬಸವಲಿಂಗನ ಹೆಂಡತಿಯ ಹೆಸರು______________

ಚ) ಅದೃಷ್ಟದ ಪ್ರಶ್ನೆ ಬಂದಾಗ ಲೇಖಕಿಗೆ ______________ ನೆನಪಾಗುತ್ತಾರೆ.

ಟ) ಧಣಿಗಳ ಮನೆಯ ಪಕ್ಕದಲ್ಲಿ ಹರಿಯುತ್ತಿದ್ದ ಹೊಳೆ ______________

ಇ) ಶೇಷನು ರಾಮಾಯಣದ ಕತೆಯನ್ನು ______________ ನಿಗೆ ಹೇಳಿದ.

ಈ) ಕಲಿಯಗದ ಅಮೃತ __________________.

## ಆ – ವಿಭಾಗ

**II. ಅ) ಯಾವುದಾದರೂ ನಾಲ್ಕು ಪ್ರಶ್ನೆಗಳಿಗೆ ಎರಡು ಮೂರು ವಾಕ್ಯಗಳಲ್ಲಿ ಉತ್ತರಿಸಿ.** 4x2=8

13. ಮಲಗಿರುವ ಭೀಮನನ್ನು ದ್ರೌಪದಿ ಹೇಗೆ ಎಬ್ಬಿಸಿದಳು?
14. ಯಾರಿಗೆ ತತ್ವಜ್ಞಾನ ಹೇಳಿ ಪ್ರಯೋಜನವಿಲ್ಲ?
15. ತಂದೆ ಮಗುವಿಗೆ ಕಾಣಿಸಿಕೊಳ್ಳುವ ಬಗೆ ಹೇಗೆ?
16. ಮುದುಕ ಏನೆಂದು ಗೋಗರೆಯುತ್ತಾನೆ?
17. ಕವಯಿತ್ರಿ ನಗುವ ನಗು ಎಂತಹುದು?

**ಆ) ಯಾವುದಾದರೂ ಮೂರು ಪ್ರಶ್ನೆಗಳಿಗೆ ಎರಡು ಮೂರು ವಾಕ್ಯಗಳಲ್ಲಿ ಉತ್ತರಿಸಿ.** 3 x 2 = 6

18. ಕಣ್ಣನ್ನು ಪರೀಕ್ಷಿಸಿದ ಡಾ॥ ತಿಮ್ಮಪ್ಪ ಬಸಲಿಂಗನಿಗೆ ಏನೆಂದು ಹೇಳಿದರು?
19. ಮಾರ್ಷ್‌ನನ್ನು ಕಂಡು ಆದಿವಾಸಿಗಳು ಹೇಗೆ ಪ್ರತಿಕ್ರಿಯಿಸಿದರು?
20. ಸಂಸ್ಕೃತ–ಕನ್ನಡಗಳು ಸೇರಿದರೆ ಹೇಗೆ ಸೊಗಯಿಸುತ್ತವೆ?
21. ಸುದ್ದಿಯ ಸೂರಪ್ಪನಾದ ಭರಮಣ್ಣ ಗೊಂಬೆಯನ್ನು ಹೇಗೆ ವರ್ಣಿಸುತ್ತಾನೆ?

**ಇ) ಯಾವುದಾದರೂ ನಾಲ್ಕು ಪ್ರಶ್ನೆಗಳಿಗೆ ಎರಡು ಮೂರು ವಾಕ್ಯಗಳಲ್ಲಿ ಉತ್ತರಿಸಿ.** 4 x 2 = 8

22. ದುರ್ಗಪ್ಪ ಏಕೆ ಬಂದಿರಬಹುದೆಂದು ನಿರೂಪಕರು ಯೋಚಿಸಿದರು?
23. ಸೊರಗಿದ್ದ ಆನೆಯನ್ನು ಕೃಷ್ಣೇಗೌಡ ಹೇಗೆ ಸಾಕಿದ?
24. ನಾಗರಾಜ ದುರ್ಗಪ್ಪನ ಮೇಲೆ ಏನೆಂದು ರೇಗಿದನು?

25. ಡ್ರೈವರ್ ಅಬ್ಬಾಸ್ ಮತ್ತು ಕ್ಲೀನರ್ ಕೃಷ್ಣರ ಸಾವಿಗೆ ಕಾರಣವೇನು?
26. ಅರಣ್ಯ ಇಲಾಖೆಯವರು ನಾಗರಾಜನನ್ನು ಕುರಿತು ಏನೆಂದು ಜಾಹೀರಾತು ನೀಡಿದರು?

## ಇ – ವಿಭಾಗ

**III . ಅ) ಯಾವುದಾದರೂ ಎರಡು ವಾಕ್ಯಗಳ ಸಂದರ್ಭ ಸೂಚಿಸಿ, ಸ್ವಾರಸ್ಯ ಬರೆಯಿರಿ.** 2x3=6

27. "ಉದಾತ್ತನೊಳ್ ಪುಟ್ಟದಲ್ತೆ ನೀಲೀರಾಗಂ"
28. "ಒಬ್ಬಳನಾಳಲಾರಿರಿ ಗಂಡರೋ ನೀವ್ ಭಂಡರೋ"
29. 'ತುಂಬಿರುವ ತನಕ ತುಂತುಂಬಿ ಕುಡಿಯಬೇಕು'.

**ಆ)ಯಾವುದಾದರೂ ಒಂದು ವಾಕ್ಯದ ಸಂದರ್ಭ ಸೂಚಿಸಿ, ಸ್ವಾರಸ್ಯ ಬರೆಯಿರಿ.** 1x3=3

30. ಒಂದೊಂದು ಭಾಷೆಯೂ ಒಂದೊಂದು ವರ.
31. ಮಿ.ಪ್ರೆಸಿಡೆಂಟ್ ನಿಮ್ಮ ಯಶಸ್ಸಿನ ಗುಟ್ಟೇನು?

**ಇ) ಯಾವುದಾದರೂ ಒಂದು ವಾಕ್ಯದ ಸಂದರ್ಭ ಸೂಚಿಸಿ, ಸ್ವಾರಸ್ಯ ಬರೆಯಿರಿ.** 1x3=3

32. 'ಆನೆಗೂ ಮಾನ ಮರ್ಯಾದೆ ಇರುತ್ತೆ ತಿಳುಕೊ'
33. 'ವೆಪನ್ ಸಾರ್ ವೆಪನ್ ನಮಗೆ ಮುಖ್ಯ'

## ಈ–ವಿಭಾಗ

**IV. ಅ) ಯಾವುದಾದರೂ ಎರಡು ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ.** 2x4=08

34. ಬಸವಣ್ಣನವರ ಪ್ರಕಾರ ನೈಜಭಕ್ತಿಯ ಲಕ್ಷಣಗಳಾವುವು?
35. ತನಗೊದಗಿದ ಸಂಕಟವನ್ನು ಹೇಳಿಕೊಳ್ಳುವ ದ್ರೌಪದಿಯ ಸ್ವಗತದ ನುಡಿಗಳಾವುವು?
36. ವೀರ,ಮಂತ್ರಿ,ರಾಜ ಮತ್ತು ಯೋಗಿಗಳಿಗೆ ಇರಬೇಕಾದ ಅರ್ಹತೆಗಳೇನು?
37. ಹೆಣ್ಣುಮಕ್ಕಳ ದುಃಖವನ್ನು ಬಲ್ಲವರು ಯಾರು?ಹೇಗೆ?

**ಆ) ಯಾವುದಾದರೂ ಒಂದು ಪ್ರಶ್ನೆಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ.** 1x4=4

38. ಬಸಲಿಂಗ ಡಾ॥ತಿಮ್ಮಪ್ಪನವರ ಸೂಚನೆಗಳನ್ನು ಪಾಲಿಸದೇ ಇರಲು ಕಾರಣಗಳೇನು?
39. ಸೀತಾ ಎಂಬ ಗೆಳತಿಯ ಗುಣಸ್ವಭಾವವನ್ನು ಲೇಖಕಿ ಹೇಗೆ ಚಿತ್ರಿಸಿದ್ದಾರೆ?
40. ಚೆನ್ನಮ್ಮ ಬೆಳ್ಳಿಲೋಟವನ್ನು ಮತ್ತೆ ಹೊಳೆಗೆ ಎಸೆಯಲು ಕಾರಣವೇನು?ವಿಶ್ಲೇಷಿಸಿ.

**ಇ) ಯಾವುದಾದರೂ ಒಂದು ಪ್ರಶ್ನೆಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ.** 1x4=4

41. ಆನೆ ಮತ್ತು ಮಾವುತ ವೇಲಾಯುಧನನ್ನು ಸಾಗಹಾಕಲು ಮಠದವರು ಹವಣಿಸಿದ್ದೇಕೆ?
42. ಕಾಡಾನೆಗಳ ಹಾವಳಿ ನಿರೂಪಕರ ಅನುಭವಕ್ಕೆ ಬಂದುದು ಹೇಗೆ?
43. ವೇಲಾಯುಧನ ಹೆಂಡತಿಗೆ ಆನೆಯ ಬಗ್ಗೆ ಸವತಿ–ಮಾತ್ಸರ್ಯ ಮೂಡಲು ಕಾರಣವೇನು?

## ಉ–ವಿಭಾಗ

**V. ಅ) ಯಾವುದಾದರೂ ಒಂದು ಪದ್ಯದ ಭಾವಾರ್ಥವನ್ನು ಬರೆಯಿರಿ.** 1x5=5

44. ಇವರಂ ಪ್ರಾಣಪ್ರಿಯರಂ
ನೆವಮಿಲ್ಲದೆ ಕರ್ಮವಶಮೆ ನೆವಮೆನೆ ಕಂದ
ರ್ಪವಿಮೋಹದಿಂದಗಲ್ಚಿದೆ
ನವಿವೇಕಿಯೆನೆನ್ನ ಕುಲದ ಪೆಂಪಳಿವಿನೆಗಂ

**ಅಥವಾ**

ಕ್ರಿಸ್ಮಸ್ ಹೊತ್ತು ತಂದಿದೆ ಈ ಮನೆಗೆ,
ಕೇಕು,ಚಳಿ, ನಕ್ಷತ್ರ ದೀಪ;
ಪ್ಲಾಸ್ಟಿಕ್ ನಕಲಿನ ಕುಬ್ಜತೆಗೆ
ಕರುಣಿಸಿದೆ ಗಿಡದ ರೂಪ;
ಅದಕ್ಕೆ ಮಂಜಿನ ಕೆಲಸ ಮಾಡಿದೆ ಹತ್ತಿ,
ಸ್ಕರ್ಟಿನ ಹುಡುಗಿಯ ಮೊಣಕಾಲಲ್ಲಿ
ಬೆಚ್ಚಗಾಗಿದೆ ಮೋಂಬತ್ತಿ.

## ಭ್ಲಾಷಾಭ್ಯಾಸ

**VI.** ಅ) **ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಆರಕ್ಕೆ ಸೂಚನೆಗೆ ಅನುಗುಣವಾಗಿ ಉತ್ತರಿಸಿ.** 6x2=12

45. ಕೆಳಗಿನ ಎರಡು ಪದಗಳಿಗೆ ನಾನಾರ್ಥಗಳನ್ನು ಬರೆಯಿರಿ.
ಅಡಿ, ಕವಿ, ಕರ
46. ಕೆಳಗಿನ ಎರಡು ಪದಗಳಿಗೆ ತದ್ಭವರೂಪ ಬರೆಯಿರಿ.
ಶ್ರೀ, ಅಗ್ನಿ, ಯೋಗಿ
47. ಕೆಳಗಿನ ಎರಡು ಪದಗಳಿಗೆ ನುಡಿಗಟ್ಟುಗಳನ್ನು ನಿಮ್ಮ ಸ್ವಂತ ವಾಕ್ಯದಲ್ಲಿ ಬಳಸಿರಿ.
ಗಾಳಿಸುದ್ದಿ, ಕಾಲುಕೀಳು, ಕೈಕೊಡು
48. ಕೆಳಗಿನ ಎರಡು ಪದಗಳಿಗೆ ಕಾಲಸೂಚಕಗಳನ್ನು ಬರೆಯಿರಿ.
ಬರುವಳು, ಹೋದನು, ಬರೆಯುತ್ತಾರೆ
49. ಕೆಳಗಿನ ಎರಡು ಪದಗಳಿಗೆ ಗುಣವಾಚಕಗಳನ್ನು ಬರೆಯಿರಿ.
ಕಿರುಹಾದಿ, ರಸಬಳ್ಳಿ, ಕಲಿಭೀಮ
50. ಕೆಳಗಿನ ಎರಡು ಪದಗಳ ವಿಭಕ್ತಿಯನ್ನು ಹೆಸರಿಸಿರಿ.
ಧರ್ಮನಿಗೆ, ರಾವಣನ, ರಾಮನನ್ನು

51. ಕೆಳಗಿನ ಎರಡು ಪದಗಳಿಗೆ ನಿಷೇಧಾರ್ಥಕ ರೂಪಗಳನ್ನು ಬರೆಯಿರಿ.
ತಿಂದಿತು, ಬರೆವನು, ಹಾಡಿದಳು

**ಆ) ಯಾವುದಾದರೂ ಒಂದನ್ನು ಕುರಿತು ಪ್ರಬಂಧವನ್ನು ಬರೆಯಿರಿ.** 1x5=5

52. ಪುಸ್ತಕಗಳ ಮಹತ್ವ

**ಅಥವಾ**

ಕ್ರೀಡೆ ಮತ್ತು ನಮ್ಮ ಆರೋಗ್ಯ

**ಇ) ಪತ್ರಲೇಖನ : ಯಾವುದಾದರೂ ಒಂದನ್ನು ಕುರಿತು ಪತ್ರ ಬರೆಯಿರಿ.** 1x4=4

53. ಬ್ಯಾಂಕಿನಲ್ಲಿ ನಿಮ್ಮ ಉಳಿತಾಯ ಖಾತೆಯ ಅಕೌಂಟ್ ತೆರೆಯಲು ವ್ಯವಸ್ಥಾಪಕರಿಗೊಂದು ಪತ್ರ ಬರೆಯಿರಿ.

**ಅಥವಾ**

ನಿಮ್ಮ ಕಾಲೇಜಿನ ವಾರ್ಷಿಕೋತ್ಸವವನ್ನು ಕುರಿತು ಸ್ನೇಹಿತರಿಗೊಂದು ಒಂದು ಪತ್ರ ಬರೆಯಿರಿ.

**ಈ) ಈ ಕೆಳಗಿನ ಗಾದೆಗಳಲ್ಲಿ ಒಂದನ್ನು ವಿಸ್ತರಿಸಿರಿ.** 1x4=4

54. ಕೋಟಿ ವಿದ್ಯೆಗಿಂತ ಮೇಟಿ ವಿದ್ಯೆ ಮೇಲು.

**ಅಥವಾ**

ದೇಶ ಸುತ್ತು ಕೋಶ ಓದು.

* * *